ಓಎಸ್ಃ 753/2006 ಡಿಡಬ್ಲ್ಯು: 1 ವೆಂಕಟೇಗೌಡ ವಿ

ಸಾಕ್ಷಿಯನ್ನು ದಿಃ 16.12.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 13 ರಿಂದ 15 ನೇ ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ

1 ನೇ ಪ್ರತಿವಾದಿ ನನ್ನ ತಾಯಿ ಇರುತ್ತಾರೆ. ನನ್ನ ತಾಯಿ ಈಗ್ಗೆ ನಾಲ್ಕು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಈಗಾಗಲೇ ಹಾಜರುಪಡಿಸಿರುತ್ತೇನೆ. ನನಗೆ ಪ್ರತಿವಾದಿ 1(ಎ), 1(ಸಿ), 1(ಡಿ), 1(ಈ) ಮತ್ತು 1 (ಎಫ್) ರವರು ಅವರ ಪರವಾಗಿ ಕೂಡ ವಿಚಾರಣೆ ನೀಡಲು ನನಗೆ ಅಧಿಕಾರ ನೀಡಿರುತ್ತಾರೆ. ಅಧಿಕಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 10 ನೇ ತರಗತಿ ವ್ಯಾಸಂಗ ಮಾಡಿರುತ್ತೇನೆ. ನಾನು ಯಾವುದೇ ಕೆಲಸವನ್ನು ಮಾಡುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಿವೃತ್ತ

ನೌಕರ ಎಂದು ನಮೂದು ಮಾಡಿರುವುದು ತಪ್ಪಾಗಿರುತ್ತದೆ. ಈ ದಾವೆಯನ್ನು ನನ್ನ ತಾಯಿ ಸಲ್ಲಿಸಿರುತ್ತಾಳೆ. ವಾದಿ ನನ್ನ ಚಿಕ್ಕಮ್ಮ ಇರುತ್ತಾಳೆ. ಈ ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಲಾಗಿರುತ್ತದೆ. ದಾವಾ ಸ್ವತ್ತಿನ ಸರ್ವೇ ಸಂಖ್ಯೆ 13/1, 13/3, 18/1, 24/1, 24/3, 25/1, 25/3 ಇರುತ್ತವೆ. ಇದರ ಒಟ್ಟು ವಿಸ್ತೀರ್ಣ 12 ಎಕರೆ 9 ಗುಂಟೆ ಇರುತ್ತದೆ. ನನಗೆ ದಾವಾ ಸ್ವತ್ತಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ದಾವಾಸ್ವತ್ತುಗಳು ಮೂಲತಃ ನಮ್ಮ ಮುತ್ತಾತ ದೊಳ್ಳಯ್ಯರವರಿಗೆ ಸೇರಿತ್ತು. ದೊಳ್ಳಯ್ಯನವರಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಅವರುಗಳು ತಿಮ್ಮಯ್ಯ, ಕರೀಗೌಡ ಮತ್ತು ಗೌಡಯ್ಯ ಇರುತ್ತಾರೆ ಎಂದರೆ ಸರಿ. ತಿಮ್ಮಯ್ಯನವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು ತಿಮ್ಮಮ್ಮ, ಚಿಕ್ಕತಾಯಮ್ಮ, ದೇವಮ್ಮ ಮತ್ತು ಮರಿದೇವಮ್ಮ ಇರುತ್ತದೆ. ಅವರಿಗೆ ಗಂಡು ಮಕ್ಕಳು ಇರುವುದಿಲ್ಲ. ಕರೀಗೌಡರಿಗೆ ಚಿಕ್ಕತಿಮ್ಮಮ್ಮ ಎಂಬ ಒಬ್ಬಳೇ ಮಗಳು ಇರುತ್ತಾಳೆ. ಗೌಡಯ್ಯರವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾತ ತಿಮ್ಮಯ್ಯನವರು ಈಗ ಮೃತಪಟ್ಟಿರುತ್ತಾರೆ. ಆದರೆ ಅವರು ಯಾವಾಗ ಮೃತಪಟ್ಟಿರುತ್ತಾರೆಂದು ನನಗೆ ಹೇಳಲಾಗುವುದಿಲ್ಲ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ ನನ್ನ ತಾತ ತಿಮ್ಮಯ್ಯನವರಿಗೆ ಒಬ್ಬರೇ ಹೆಂಡತಿ ಇದ್ದು ಅವರ ಹೆಸರು ಚಿಕ್ಕಹೆಣ್ಣಮ್ಮ ಎಂದು ಇರುತ್ತದೆ. ನನ್ನ ಅಜ್ಜಿ ಚಿಕ್ಕಹೆಣ್ಣಮ್ಮ ಈಗ ಮೃತಪಟ್ಟಿರುತ್ತಾರೆ. ನಾನು ದಾವಾ ಸ್ವತ್ತುಗಳ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತುಗಳ ಪಹಣಿ ಪತ್ರಿಕೆಗಳು ಈಗಲೂ ಸಹ ನನ್ನ ತಾತನ ಹೆಸರಿನಲ್ಲಿಯೇ ಇರುತ್ತದೆ. ದೊಳ್ಳಯ್ಯನ ಮೂರು ಜನ ಗಂಡು ಮಕ್ಕಳು ಈಗ ಮೃತಪಟ್ಟಿರುತ್ತಾರೆ. ದೊಳ್ಳಯ್ಯನ ಮೂರು ಜನ ಗಂಡು ಮಕ್ಕಳು ಜೀವಂತ ಇದ್ದ ಕಾಲದಲ್ಲಿ ಅವರ ನಡುವೆ ಮೌಖಿಕ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ಸದರಿ

ವಿಭಾಗದಂತೆ ಯಾಂದಳ್ಳಿ ಗ್ರಾಮದ ಸಃನಂಃ 24/1 ರ 1 ಎಕರೆ 37 ಗುಂಟೆ, 25/1 ರ 1 ಎಕರೆ ಜಮೀನು ತಿಮ್ಮಯ್ಯನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಃನಂಃ 13/1 ರ ರಲ್ಲಿ 1 ಎಕರೆ 22 ಗುಂಟೆ, 13/2 ರಲ್ಲಿ 1 ಎಕರೆ 28 ಗುಂಟೆ, 24/3 ರಲ್ಲಿ 2 ಎಕರೆ 7 ಗುಂಟೆ, 25/3 ರಲ್ಲಿ 1 ಎಕರೆ 6 ಗುಂಟೆ ಜಮೀನು ಗೌಡಯ್ಯನವರ ಪಾಲಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸಃನಂಃ 13/2 ರಲ್ಲಿ 13 ಗುಂಟೆ, 18/1 ರಲ್ಲಿ 2 ಎಕರೆ 16 ಗುಂಟೆ ಕರೀಗೌಡರವ ಪಾಲಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ತಿಮ್ಮಯ್ಯನ ಪಾಲಿಗೆ ಬಂದ ಜಮೀನುಗಳನ್ನು ಅವರ ಹೆಣ್ಣು ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ 24/1 ರಲ್ಲಿ 30 ಗುಂಟೆ ನನ್ನ ತಾಯಿ ತಿಮ್ಮಮ್ಮನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಃನಂಃ 24/1 ರ 30 ಗುಂಟೆ 2 ನೇ ಪ್ರತಿವಾದಿ ಚಿಕ್ಕತಾಯಮ್ಮನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಃನಂಃ 24/1 ರಲ್ಲಿ 17 ಗುಂಟೆ, 25/1 ರಲ್ಲಿ 12 ಗುಂಟೆ 3 ನೇ ಪ್ರತಿವಾದಿ ದೇವಮ್ಮನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮರಿದೇವಮ್ಮನಿಗೆ 25/1 ರಲ್ಲಿ 28 ಗುಂಟೆ ಜಮೀನು ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲದೇ ಮನೆಗಳು ಕೂಡ ವಿಭಾಗವಾಗಿ ಅವರವರ ಸ್ವಾಧೀನದಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

ನಿಪಿ. 1 ದಾನಪತ್ರವನ್ನು ನಾನು ನೋಡಿರುತ್ತೇನೆ ಸದರಿ ದಾನಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಅವರ ಪಾಲಿಗೆ ಬಂದಿದ್ದ 30 ಗುಂಟೆ ಜಮೀನನ್ನು ದಿನಾಂಕ 14.05.1964 ರಲ್ಲಿ ಚಿಕ್ಕ ತಾಯಮ್ಮನಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳನ್ನು ಈಗ್ಗೆ 15 ದಿನಗಳ ಹಿಂದೆ ನಾನು ನೋಡಿರುತ್ತೇನೆ. 14 ಮತ್ತು 15 ನೇ ಪ್ರತಿವಾದಿಗೆ ಯಾವಾಗ ಕ್ರಯಪತ್ರ ಆಗಿರುತ್ತದೆ ಎಂದು ನನಗೆ ಹೇಳಲು

ಆಗುವುದಿಲ್ಲ. 13 ನೇ ಪ್ರತಿವಾದಿ ಯಾರಿಂದ ಜಮೀನು ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಚಿಕ್ಕತಿಮ್ಮಮ್ಮ ತನ್ನ ಭಾಗದ ಜಮೀನನ್ನು ಟೇಕ್ ಚಂದ್ ಎಂಬುವವರಿಗೆ ಮಾರಾಟ ಮಾಡಿದ್ದಳು ಎಂದರೆ ಸರಿಯಲ್ಲ. ಸದರಿ ಟೇಕ್ ಚಂದ್ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು 13 ನೇ ಪ್ರತಿವಾದಿ ಬವರ್ ಲಾಲ್ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಾನು ನೋಡಿರುವುದಿಲ್ಲ ದಾವಾ ಸಃನಂಃ 24/1 ಮತ್ತು 25/1 ಗಳನ್ನು ದಿನಾಂಕ 09.09.2010 ರಲ್ಲಿ 15 ನೇ ಪ್ರತಿವಾದಿ ಆರ್ಮಿ ವೆಲ್ ಫೇರ್ ಹೌಸಿಂಗ್ ಸೊಸೈಟಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಉತ್ತಮ ಸಂಬಂಧ ಇರುತ್ತದೆ. ದಾವಾಸ್ವತ್ತುಗಳಲ್ಲಿ ಹಿಂದೆಯೇ ವಿಭಾಗ ಆಗಿ ನಮ್ಮ ನಮ್ಮ ಭಾಗಕ್ಕೆ ಬಂದ ಸ್ವತ್ತುಗಳನ್ನು ಮಾರಾಟ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಬೆಲೆ ಹೆಚ್ಚಾಗಿರುವುದರಿಂದ ವಾದಿ ಹಾಗೂ ನಾವು ಷಾಮೀಲಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ತನ್ನ ಪಾಲಿಗೆ ಬಂದಂತಹ ಜಮೀನನ್ನು ಮಾರಾಟ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ನನ್ನ ತಾಯಿ ಅಥವಾ ವಾದಿ ಕಂದಾಯ ಪಾವತಿ ಮಾಡಿರುವುದಿಲ್ಲ ಕಾರಣ ಖಾತೆ ಬದಲಾವಣೆ ಆಗಿರುವುದಿಲ್ಲ. ದಾವಾಸ್ವತ್ತುಗಳು ಮಾರಾಟವಾದ ಪ್ರಕಾರ ಕ್ರಯದಾರರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಕ್ರಯದಾರರ ಖಾತೆಗಳನ್ನು ನಾವು ಪ್ರಶ್ನಿಸಿರುವುದಿಲ್ಲ ಎಂಬ ಪ್ರಶ್ನೆಗೆ ಖಾತೆಯೇ ಬದಲಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ, ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಆಗಿದ್ದರೂ ಸಹ ಆಗಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಾಗಲೀ ಅಥವಾ ನಮಗಾಗಲೀ

ದಾವಾಸ್ವತ್ತಿನಲ್ಲಿ ಯಾವುದೇ ಭಾಗ ಬರಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ತಿಮ್ಮಯ್ಯನವರು ತಮ್ಮ ಜೀವಿತ ಕಾಲದಲ್ಲಿ ತನ್ನ ಅಣ್ಣತಮ್ಮಂದಿರ ವಿರುದ್ಧ ವಿಭಾಗಕ್ಕಾಗಿ ಯಾವುದೇ ದಾವೆ ಸಲ್ಲಿಸಿರಲಿಲ್ಲ. ವಾದಿಗೆ ಸಹಾಯವಾಗಬೇಕೇಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.